don't claim that it is Government's money. ಇದು ಸರ್ಕಾರದ್ದೆಂದು ಹೇಳುವುದಕ್ಕೆ ಬರುವುದಿಲ್ಲ. ನೀವು ಬಿಡುಗಡೆ ಮಾಡಿಲ್ಲ, BDA ದುಡ್ಡು. ಆದುದರಿಂದ ಸುಮ್ಮನೆ ಜಾಸ್ತಿ ಹೇಳಿಕೊಳ್ಳುವುದಕ್ಕೆ ಹೋಗಬೇಡಿ, ಕಣ್ಣು ಹೊರೆಸುವುದಕ್ಕು ಹೇಳುತ್ತಿದ್ದಾರೆಂದು ಜನರಿಗೆ ಗೊತ್ತಾಗುತ್ತದೆ, ಏನೋ ಹಳ್ಳಿಯವರಿಗೆ ಮುಗಿಗೆ ತುಪ್ಪ ಗಿಪ್ಪ ಹಚ್ಚಿದರೆ ನಡೆಯುತ್ತದೆ, ಬೆಂಗಳೂರಿನಲ್ಲಿರುವವರೆಲ್ಲಾ ಇದನ್ನೆಲ್ಲಾ ತಿಳಿದುಕೊಳ್ಳುತ್ತಾರೆ. ಅಧ್ಯಕ್ಷರೆ, ಉಳಿದಿದ್ದನ್ನು ನಾಳೆ Action Taken Report ಓದಿಕೊಂಡು ಬಂದು ಒಂದು ಗಂಟೆ ಮಾತನಾಡಿ ಮುಗಿಸುತ್ತೇನೆ ದಯಮಾಡಿ, ನಾಳೆ ತೆಗೆದುಕೊಳ್ಳಿ, ಆಗಬಹುದಲ್ಲ.

ಅಧ್ಯಕ್ಷರು : ಆಗಬಹುದು. His Excellency Ambassador of Poland is witnessing the Proceedings of this August House and we all welcome him. ವಿಧೇಯಕಗಳನ್ನು ತೆಗೆದುಕೊಳ್ಳುವುದು.

11. ಶಾಸನ ರಚನೆ :

(ಅ) ವಿಧೇಯಕಗಳನ್ನು ಪರ್ಯಾಲೋಚಿಸುವುದು ಹಾಗೂ ಅಂಗೀಕರಿಸುವುದು :

(1) ಬೆಂಗಳೂರು ಮಹಾನಗರ ಪ್ರದೇಶ ಅಭಿವೃದ್ಧಿ ಪ್ರಾಧಿಕಾರ (ತಿದ್ದುಪಡಿ) ವಿಧೇಯಕ, 2009 ಪರ್ಯಾಲೋಚನಾ ಪ್ರಸ್ತಾವ

ಶ್ರೀ ಎಸ್. ಸುರೇಶ್‌ಕುಮಾರ್ (ಕಾನೂನು ಮತ್ತು ಸಂಸದೀಯ ವ್ಯವಹಾರಗಳ ಸಚಿವರು) : ಮಾನ್ಯ ಅಧ್ಯಕ್ಷರೆ, 2009ರ ಬೆಂಗಳೂರು ಮಹಾನಗರ ಪ್ರದೇಶ ಅಭಿವೃದ್ಧಿ ಪ್ರಾಧಿಕಾರ (ತಿದ್ದುಪಡಿ) ವಿಧೇಯಕವನ್ನು ಪರ್ಯಾಲೋಚಿಸಬೇಕೆಂದು ಕೋರುತ್ತೇನೆ.

ಪ್ರಸ್ತಾವವನ್ನು ಮಂಡಿಸಲಾಯಿತು

ಅಧ್ಯಕ್ಷರು : ಪ್ರಸ್ತಾವ ಏನೆಂದರೆ, 2009ರ ಬೆಂಗಳೂರು ಮಹಾನಗರ ಪ್ರದೇಶ ಅಭಿವೃದ್ಧಿ ಪ್ರಾಧಿಕಾರ (ತಿದ್ದುಪಡಿ) ವಿಧೇಯಕ ಪರ್ಯಾಲೋಚಿಸುವುದು.

ಶ್ರೀ ಎಸ್. ಸುರೇಶ್‌ಕುಮಾರ್ : ಮಾನ್ಯ ಅಧ್ಯಕ್ಷರೆ, ಈ ನಿಗಮ, ಮಂಡಳಿಗಳ ಅಕೌಂಟ್ಸ್ ಅನ್ನು ನಮ್ಮ ಸದನದಲ್ಲಿ ಇಡುತ್ತಿದ್ದೇವೆ. ಆದರೆ ಬೆಂಗಳೂರು ಮಹಾನಗರ ಪ್ರದೇಶ ಅಭಿವೃದ್ಧಿ ಪ್ರಾಧಿಕಾರ ಏನಿದೆ, ಅದರ ವಾರ್ಷಿಕ ಮತ್ತು ಲೆಕ್ಕಪರಿಶೋಧನಾ ವರದಿಯನ್ನು ಇದುವರೆವಿಗೂ ಈ ಸದನದಲ್ಲಿ ಮಂಡಿಸುತ್ತಿರಲಿಲ್ಲ. ಅದನ್ನು ಕರ್ನಾಟಕ ವಿಧಾನಮಂಡಲದ

ಕಾಗದ ಪತ್ರಗಳ ಸಮಿತಿಯು ಗಮನಿಸಿ, ಇನ್ನು ಮುಂದೆ ಈ ಬೆಂಗಳೂರು ಮಹಾನಗರ ಪ್ರದೇಶ ಅಭಿವೃದ್ಧಿ ಪ್ರಾಧಿಕಾರದ ವಾರ್ಷಿಕ ಮತ್ತು ಲೆಕ್ಕಪರಿಶೋಧನಾ ವರದಿಯನ್ನು ಉಭಯ ಸದನಗಳ ಮುಂದೆ ಮಂಡಿಸಬೇಕು, ಅದಕ್ಕೆ ಅವಕಾಶ ಕಲ್ಪಿಸಲು ಬಿಎಂಆರ್‌ಡಿಎಗೆ ತಿದ್ದುಪಡಿ ತರಬೇಕೆಂದು ಹೇಳಿದ್ದರು. ಅದಕ್ಕೋಸ್ಕರ ಇನ್ನು ಮುಂದೆ ಬಿಎಂಆರ್‌ಡಿಎ ಯದು ಅಕೌಂಟ್ಸ್ ಏನಿದೆ ಅದನ್ನು ನಮ್ಮ ಸದನದಲ್ಲಿ ಮಂಡಿಸುವುದಕ್ಕೋಸ್ಕರ ಸಣ್ಣ ತಿದ್ದುಪಡಿಯನ್ನು ತರಲಾಗಿದೆ ಸದನ ದಯವಿಟ್ಟು ಒಪ್ಪಿಕೊಳ್ಳಬೇಕೆಂದು ಕೇಳಿಕೊಳ್ಳುತ್ತೇನೆ.

ಪ್ರಸ್ತಾವ ಅಂಗೀಕರಿಸಲ್ಪಟ್ಟಿತು

ಖಂಡ ಖಂಡವಾಗಿ ವಿಧೇಯಕವನ್ನು ಪರ್ಯಾಲೋಚಿಸುವುದು

ಅಧ್ಯಕ್ಷರು : "ಖಂಡ 2 ರಿಂದ 8ರವರೆಗೆ ಎರಡೂ ಸೇರಿದಂತೆ ಈ ವಿಧೇಯಕದ ಅಂಗವಾಗಿರುತ್ತದೆ".

ಪ್ರಸ್ತಾವ ಅಂಗೀಕರಿಸಲ್ಪಟ್ಟಿತು

(ಖಂಡ 2 ರಿಂದ 8 ರವರೆಗೆ ಎರಡೂ ಸೇರಿದಂತೆ ವಿಧೇಯಕಕ್ಕೆ ಸೇರಿಸಲಾಯಿತು)

ಖಂಡ 1 ಇತ್ಯಾದಿ :

ಅಧ್ಯಕ್ಷರು : ಪ್ರಸ್ತಾವ ಏನೆಂದರೆ, "ಮೊದಲನೆಯ ಖಂಡ, ದೀರ್ಘ ಶೀರ್ಷಿಕೆ, ಪ್ರಸ್ತಾವನೆ ಹಾಗೂ ಅಧಿನಿಯಮಗೊಳಿಸುವ ಸೂತ್ರ ಸಂಹಿತೆ ವಿಧೇಯಕದ ಭಾಗವಾಗಿರುತ್ತದೆ."

ಪ್ರಸ್ತಾವ ಅಂಗೀಕರಿಸಲ್ಪಟ್ಟಿತು

(ಮೊದಲನೆಯ ಖಂಡ, ದೀರ್ಘ ಶೀರ್ಷಿಕೆ, ಪ್ರಸ್ತಾವನೆ ಹಾಗೂ ಅಧಿನಿಯಮಗೊಳಿಸುವ ಸೂತ್ರ ಸಂಹಿತೆ ವಿಧೇಯಕಕ್ಕೆ ಸೇರಿಸಲಾಯಿತು)

ಪ್ರಸ್ತಾವ ಅಂಗೀಕಾರ

ಶ್ರೀ ಎಸ್. ಸುರೇಶ್‌ಕುಮಾರ್ (ಕಾನೂನು ಮತ್ತು ಸಂಸದೀಯ ವ್ಯವಹಾರಗಳ ಸಚಿವರು) : ಮಾನ್ಯ ಅಧ್ಯಕ್ಷರೆ, 2009ರ ಬೆಂಗಳೂರು ಮಹಾನಗರ ಪ್ರದೇಶ ಅಭಿವೃದ್ಧಿ ಪ್ರಾಧಿಕಾರ (ತಿದ್ದುಪಡಿ) ವಿಧೇಯಕವನ್ನು ಅಂಗೀಕರಿಸಬೇಕೆಂದು ಕೋರುತ್ತೇನೆ.

ಅಧ್ಯಕ್ಷರು : ಪ್ರಸ್ತಾವ ಏನೆಂದರೆ, "2009 ಬೆಂಗಳೂರು ಮಹಾನಗರ ಪ್ರದೇಶ ಅಭಿವೃದ್ಧಿ ಪ್ರಾಧಿಕಾರ (ತಿದ್ದುಪಡಿ) ವಿಧೇಯಕವನ್ನು ತಿದ್ದುಪಡಿ ಮಾಡಿರುವಂತೆ ಅಂಗೀಕರಿಸುವುದು".

ಪ್ರಸ್ತಾವ ಅಂಗೀಕರಿಸಲ್ಪಟ್ಟಿತು ಮತ್ತು ಮಸೂದೆಗೆ ಒಪ್ಪಿಗೆ ನೀಡಲಾಯಿತು

(ಆ) ಕರ್ನಾಟಕ ರಾಜ್ಯ ಸಿವಿಲ್ ಸೇವೆಗಳ (ತಿದ್ದುಪಡಿ) ವಿಧೇಯಕ, 2009

ಪರ್ಯಾಲೋಚನ ಪ್ರಸ್ತಾವ

ಶ್ರೀ ಎಸ್. ಸುರೇಶ್‌ಕುಮಾರ್ (ಕಾನೂನು ಮತ್ತು ಸಂಸದೀಯ ವ್ಯವಹಾರಗಳ ಸಚಿವರು) : ಮಾನ್ಯ ಅಧ್ಯಕ್ಷರೆ, 2009, ಕರ್ನಾಟಕ ರಾಜ್ಯ ಸಿವಿಲ್ ಸೇವೆಗಳ (ತಿದ್ದುಪಡಿ) ವಿದೇಯಕವನ್ನು ಪರ್ಯಾಲೋಚಿಸಬೇಕೆಂದು ಕೋಡುತ್ತೇನೆ.

ಪ್ರಸ್ತಾವವನ್ನು ಮಂಡಿಸಲಾಯಿತು

ಅಧ್ಯಕ್ಷರು : ಪ್ರಸ್ತಾವ ಏನೆಂದರೆ, 2009, ಕರ್ನಾಟಕ ರಾಜ್ಯ ಸಿವಿಲ್ ಸೇವೆಗಳ (ತಿದ್ದುಪಡಿ) ವಿಧೇಯಕವನ್ನು ಪರ್ಯಾಲೋಚಿಸುವುದು.

ಶ್ರೀ ಎಸ್. ಸುರೇಶ್‌ಕುಮಾರ್ : ಮಾನ್ಯ ಅಧ್ಯಕ್ಷರೆ, ನಮ್ಮ ಕರ್ನಾಟಕ ರಾಜ್ಯ ಸಿವಿಲ್ ಸೇವೆಗಳ ಅಧಿನಿಯಮ 1978ರ ಪ್ರಕಾರ 2 ಹಂತಗಳಿವೆ, ಒಂದು ನೇಮಕಾತಿ ಹಂತ, ಇನ್ನೊಂದು ಹುದ್ದೆಗಳನ್ನು ಸೃಷ್ಟಿ ಮಾಡುವುದು. ಹುದ್ದೆಗಳ ಸಂಖ್ಯೆಗಳ ನಿಗದಿ ಪಡಿಸುವಾಗ, ನಾವು ಹದಿನೈದೂ ನೂರೈವತ್ತೊ ಮಾಡುವಾಗ ಅದಕ್ಕೆ ಹಿಂದೆ ಒಂದು ಕಾನೂನು ಇದೆ. ಅದಕ್ಕೂ ಕೂಡ 15 ದಿವಸಕ್ಕೆ ಮುಂಚೆ ಪ್ರಕಟಣೆ ಮಾಡಬೇಕು, 15 ದಿವಸ ಕಾಲಾವಕಾಶವಾದ ನಂತರ ಮಾಡಬೇಕು ಎಂದಿದೆ. ಈಗ ನೇಮಕಾತಿ ವಿಧಾನವನ್ನು ನಾವು ಮಾಡುವಾಗ, ಆ ರೀತಿ 15 ದಿವಸಗಳ ಕಾಲ ಸಮಯಾವಕಾಶವನ್ನು ಕೊಡುತ್ತಿದ್ದೇವೆ. ಹುದ್ದೆಗಳ ಸೃಜನೆ ಅಥವಾ ಹುದ್ದೆಗಳ ಸಂಖ್ಯೆಗಳನ್ನು ನಿಗದಿ